ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಗುರುವಾರ, ದಿನಾಂಕ : 24 ನೇ ಸೆಪ್ಟೆಂಬರ್, 2020

ಪ್ರಾಧಿಕಾರದ ಸ್ವತ್ತುಗಳನ್ನು ರಕ್ಷಿಸುವ ಬಗ್ಗೆ

ಶ್ರೀ ನಸೀರ್ ಅಹ್ಮದ್(ವಿಧಾನಸಭೆಯಿಂದ ಚುನಾಯಿತರಾದವರು ) -

501 (639) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ -

(ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ನೌಕರರ ಕ್ಷೇಮಾಭಿವೃದ್ಧಿ ಸಂಘಕ್ಕೆ ಪ್ರಾಧಿಕಾರದಿಂದ ಬಿಡುಗಡೆಯಾಗಿರುವ ಜಮೀನು ಎಷ್ಟು; (ಸ್ಥಳ, ಸರ್ವೆ ನಂಬರ್ ಮತ್ತು ಸರ್ವೆ ನಂಬರ್ ವಿಸ್ತೀರ್ಣವಾರು ವಿವರ ನೀಡುವುದು)

(ಆ) ದೊಡ್ಡಕಲ್ಲಸಂದ್ರದ ಸ.ನಂ. 19 ಮತ್ತು ಲಿಂಗಧೀರನ ಹಳ್ಳಿಯ ಸ.ನಂ. 1/4(ಪಿ), 7/5(ಪಿ), 7/6(ಪಿ), 7/8(ಪಿ) ಮತ್ತು 7/9(ಪಿ) ಗಳಲ್ಲಿ ಜಮೀನುಗಳನ್ನು ಅಕ್ರಮವಾಗಿ ಅನುಮೋದಿತ ನಕ್ಷೆಯಲ್ಲಿ ಸೇರಿಸಿರುವುದು ನಿಜವೆ; ಇಲ್ಲದಿದ್ದಲ್ಲಿ, ಸದರಿ ಸರ್ವೆ ನಂಬರ್ವಾರು ಜಮೀನಿನ ವಿಸ್ತೀರ್ಣದ ವಿವರ ಮತ್ತು ಕ್ರಯಪತ್ರಗಳನ್ನು ನೀಡುವುದು; ಅಕ್ರಮವಾಗಿ ಸೇರಿಸಿದ್ದಲ್ಲಿ, ಈ ಅಕ್ರಮಕ್ಕೆ ಕಾರಣವಾದ ಅಧಿಕಾರ/ನೌಕರರ ಹೆಸರು ಮತ್ತು ಅವರುಗಳ ವಿರುದ್ಧ ಕೈಗೊಂಡ ಕ್ರಮಗಳೇನು ಹಾಗೂ ಈ ಜಮೀನುಗಳನ್ನು ಸ್ವಾಧೀನ ಪಡಿಸಿಕೊಳ್ಳಲು ಪ್ರಾಧಿಕಾರ ಕೈಗೊಳ್ಳುವ ಕ್ರಮಗಳೇನು;

(ಇ) ಲಿಂಗಧೀರನಹಳ್ಳಿ ಬಡಾವಣೆಯಲ್ಲಿ ರಚಿತವಾದ ಒಂದು ಎಕರೆ ವಿಸ್ತೀರ್ಣದ ಸಿ.ಎ. ನಿವೇಶನ ಅಕ್ರಮವಾಗಿ ಮಾರಾಟವಾಗಿದ್ದು ನಿಜವೆ; ಇದ್ದಲ್ಲಿ ಈ ಅಕ್ರಮಕ್ಕೆ ಕಾರಣರಾದವರ ವಿರುದ್ಧ ಕೈಗೊಂಡಿರುವ ಕ್ರಮಗಳೇನು; ವಿವರ ನೀಡುವುದು ಹಾಗೂ ಪ್ರಸ್ತುತ ಪ್ರಾಧಿಕಾರವು ಸಿ.ಎ. ನಿವೇಶನವನ್ನು ವಶಪಡಿಸಿಕೊಂಡಿದೆಯೇ;

(ಈ) ಸಂಘದಿಂದ ನಿವೇಶನ ಸಿಗದೇ ವಂಚನೆಗೊಳಗಾಗಿರುವ ಪ್ರಾಧಿಕಾರದ ನಿವೃತ್ತ ನೌಕರರಿಗೆ ನಿವೇಶನಗಳನ್ನು ಒದಗಿಸಿಕೊಡುವ ದಿಸೆಯಲ್ಲಿ ಜರುಗಿರುವ ಕ್ರಮಗಳೇನು?